ದಿಢೀರನೆ ಇದಿರಿನಲ್ಲಿ ಪ್ರತ್ಯಕ್ಷವಾಗುವುದು ಎಂದರೆ! ಅವನೂ ನಿರೀಕ್ಷಿಸಿರಲಿಲ್ಲವೇನೋ! ಸುಮ್ಮನೇ ನಿಂತುಬಿಟ್ಟಿದ್ದ. ಅವನು ಸೊರಗಿದ್ದ. ಕೆನ್ನೆಗಳಲ್ಲಿ ಗುಳಿ ಎದ್ದು ಕಾಣಿಸುತ್ತಿತ್ತು. ಸ್ವಲ್ಪ ಹೊತ್ತಾದ ನಂತರ ಕೇಳಿದ, 'ಹೇಗಿದ್ದೀಯ?' ಧ್ವನಿ ಮಾತ್ರ ಅದೇ ದರ್ಪ. ಘಂಟೆ ಹೊಡೆದಂತೆ. ಯಾಕೋ ವಿಪರೀತವಾದ ಒಂದು ಅಲೆ ಒಳಗಿನಿಂದ ಎದ್ದೆದ್ದು ಬಂತು... ಮುಖ ತಿರುಗಿಸಿಕೊಂಡು ನಡೆದುಬಿಡಬೇಕು. ಇನ್ನು ಜನ್ಮ ಜನ್ಮಕ್ಕೂ ಇವನಿಗೆ ಸಿಗಬಾರದು. ಬಹಳ ಸಹನೆಯಿಂದ ತಡೆದು, 'ಚೆನ್ನಾಗಿದ್ದೀನಿ' ಅಂದೆ. ನೀರಸವಾಗಿತ್ತು. 'ಕೋಪ ಇನ್ನೂ ಹೋಗಿಲ್ವಾ?' ಕೇಳಿದ. ಆಗಲೇ ನನಗೆ ಗೊತ್ತಾಗಿದ್ದು, ನನ್ನೊಳಗೆ ಬಹುಶಃ ಕೋಪದ ಆವೇಶ ಕಾಡುತ್ತಿರಬೇಕು ಅಂತ. 'ಹಾಗೇನೂ ಇಲ್ಲ' ಅಂದೆ. ಸಪ್ಪೆಯಾಗೇ ಮಾತನಾಡಿದೆ. 'ನನ್ನನ್ನ ಕ್ಷಮಿಸಲ್ವಾ?' ಕೇಳಿದ. ಒಂದು ಸಲ ಅವನ ಮುಖ ದಿಟ್ಟಿಸಿ ನೋಡಿದೆ... ಯಾತನೆ ಎದ್ದು ಕಾಣಿಸುತ್ತಿತ್ತು. ನನ್ನೊಳಗಿನ ಕೋಪದ ಬೆಟ್ಟ ಕರಗಿದ್ದು ಆಗಲೇ ಇರಬೇಕು. 'ಕ್ಷಮೆ... ಹಾಗೆಲ್ಲ ಏನೂ ಇಲ್ಲ. ಎಲ್ಲಾ ಕಳಚಿಹೋಗಿದೆ. ಇಲ್ಲಿ ಕ್ಷಮೆ ಅಥವಾ ಕೋಪ ಯಾವುದೂ ಉಳಿಯಲ್ಲ' ಅಂದೆ. ಆದರೆ, ಆ ಕ್ಷಣದಲ್ಲಿ ನನ್ನೊಳಗೆ ಅನ್ನಿಸಿದ್ದು... 'ಇನ್ನೂ ಯಾಕೆ ನಾನು ಹಟ ಹಿಡಿಯಬೇಕು. ಹೊಂದಿಕೊಂಡು ಹೋಗಿ ಬದುಕ ಬಹುದು' ಅಂತ.

ಅವನು ಉಗುಳು ನುಂಗಿದ.

'ವಾಸಂತಿ... ನೀನು ಮತ್ತೆ ಮನೆಗೆ ಬಾ. ಹೂವಿನ ಥರ ನೋಡಿಕೊಳ್ತೀನಿ. ಪ್ರಭ, ನೀನು ಇಬ್ಬರನ್ನೂ ನನ್ನ ಕಂಗಳ ಥರ ಕಾಪಾಡುತ್ತೀನಿ. ದಯವಿಟ್ಟು ಬಾ... ನೀನು ಹೋದಮೇಲೆಯೇ ನನಗನ್ನಿಸಿದ್ದು ನನ್ನ ಬದುಕಿನಲ್ಲಿ ನೀನೆಷ್ಟು ಮುಖ್ಯ ಅಂತ. ಸುಮತಿಯನ್ನು ನೋಡಿದಮೇಲೆ, ಅವಳ ಜೊತೆ ಬದುಕುವಾಗ ಪ್ರತಿಕ್ಷಣವೂ ಅಂದು ಕೊಂಡಿದ್ದೀನಿ. ನಿನಗೆ ಮತ್ತು ಅವಳ ನಡುವೆ ಅಗಾಧವಾದ ಅಂತರ ಇದೆ ಅಂತ... ಅವಳು ಯಾವತ್ತೂ ನಿನ್ನಂತೆ ಇರಲು ಸಾಧ್ಯ ಇಲ್ಲ ವಾಸಂತಿ... ದಯವಿಟ್ಟು ಬಾ... ಯಾವತ್ತೂ ನಿನ್ನ ಸ್ಥಾನ ನಿನಗೆ ಇದ್ದೇ ಇರುತ್ತೆ...'

ತಕ್ಷಣವೇ ಜಾಗೃತಳಾಗಿ ಬಿಟ್ಟೆ. ಊಹೂಂ... ಇಲ್ಲ. ಸಾಧ್ಯವೇ ಇಲ್ಲ. ನನ್ನೊಳಗಿನ ವಾಸಂತಿ ಇದನ್ನು ಒಪ್ಪುವುದಿಲ್ಲ. ನಕ್ಕು ಬಿಟ್ಟೆ... 'ಹೇಗೆ ಸಾಧ್ಯ? ನನ್ನಂತೆ ಅವಳಿರಲು ಅಥವಾ ಅವಳಂತೆ ನಾನಿರಲು! ಯಾರು ಹೇಗೆ ಇರ್ತಾರೋ ಅವರನ್ನು ಹಾಗೇ ಸ್ವೀಕರಿಸಬೇಕಾದ್ದೇ ಧರ್ಮ ಅಲ್ವ?' ಸ್ವಲ್ಪ ಒರಟಾಗಿ ಕೇಳಿದೆ. 'ನನಗೆ ಸ್ಥಾನದ ಚಿಂತೆ ಕಾಡಿದ್ದರೆ ನಾನಿರುತ್ತಿದ್ದುದೇ ಬೇರೆಯ ರೀತಿ. ಜೀವನದಲ್ಲಿ ನಾನು ಯಾವತ್ತೂ ಎಲ್ಲಿಯೂ ಸ್ಥಾನಕ್ಕಾಗಿ ಹಂಬಲಿಸಿಲ್ಲ. ಈಗ ನನಗೆ ಯಾರ ಸ್ಥಾನವನ್ನೂ ಕಿತ್ತುಕೊಳ್ಳುವ ಇಚ್ಛೆಯೂ ಇಲ್ಲ. ಇದನ್ನು ಇಲ್ಲಿಗೆ ಬಿಟ್ಟುಬಿಡಿ. ನಿಮ್ಮ ಜೀವನದಲ್ಲಿ ನನ್ನ ಅಧ್ಯಾಯ ಮುಗಿದ ಕಥೆ. ಹಾಗೆಯೇ ನನ್ನ ಜೀವನದಲ್ಲಿ ಕೂಡ.' ನೇರವಾಗಿ ದಿಟ್ಟವಾಗಿ ಹೇಳಿ ಬಿರಬಿರನೆ ನಡೆದು ಬಿಟ್ಟಿದ್ದೆ.

ಹೌದು, ನನಗೆ ಯಾರ ಸ್ಥಾನವನ್ನಾಗಲಿ, ಹಕ್ಕುಗಳನ್ನಾಗಲಿ ಕಿತ್ತುಕೊಳ್ಳುವ ಮನಸ್ಸು ಎಂದೂ ಇರಲಿಲ್ಲ. ಅವರವರು ಬೇಡಿದ್ದನ್ನು ನೀಡಿಬಿಟ್ಟು ಸರಿಯುವುದನ್ನೇ ಅಭ್ಯಾಸ ಮಾಡಿಕೊಂಡವಳು. ಇದೇ ಕಾರಣದಿಂದಲೇ ಪ್ರಭಳ ಮದುವೆಯಲ್ಲಿ ಕೂಡ ಸುಬ್ರಹ್ಮಣ್ಯ, ಸುಮತಿಯನ್ನೇ ಧಾರೆಗೆ ಕೂರಿಸಿದ್ದು. ಆದರೆ ಅವತ್ತಂತೂ ಇಬ್ಬರೂ ಬಿಕ್ಕಿ ಬಿಕ್ಕಿ ಅತ್ತುಬಿಟ್ಟಿದ್ದರು. ಎಲ್ಲರಿಗೂ ಪ್ರಭಳ ಬೀಳ್ಕೊಡುಗೆ ಅಳು ಅನ್ನಿಸಿತ್ತು.

ವಾಸಂತಿ ಇದ್ದ ಒಂದು ಕೋಣೆಯನ್ನು ಮಗಳಿಗೆಂದು ಸಜ್ಜು ಮಾಡಿಟ್ಟಳು. ತನಗೇನು, ಹಾಲಿನಲ್ಲೇ ಮಲಗಿದರೂ ಸಾಕು. ಹದಿನೈದು ದಿನ ಎಲ್ಲಿಯೂ ಅಡುಗೆ ಕೆಲಸಕ್ಕೆ ಒಪ್ಪಿಕೊಳ್ಳುವುದು ಬೇಡ ಎಂದು ಫೋನ್ ಮಾಡಿ ಪಂಕಜಳಿಗೆ ತಿಳಿಸಿದಳು. ಮೊಮ್ಮಗನಿಗೆಂದು ಶಾವಿಗೆ ಮಾಡಿಟ್ಟಳು. ತಾನು ಕೂಡ ಸಂಭ್ರಮದಿಂದ ತಲೆಬಾಚಿ, ಕಡುನೀಲಿ ಬಣ್ಣದ ಹತ್ತಿ ಸೀರೆ ಉಟ್ಟಿದ್ದಳು. ಅದಕ್ಕೆ ಇಟ್ಟಿಗೆ ಬಣ್ಣದ